ಪ್ರತಿಕ್ರಿಯೆ

# ತಾಯಿ ಕಸ್ತೂರರಿಗೆ ಮೆಚ್ಚುಗೆ–ನಮನ

### ಕಾವ್ಯ-ಕಥನದ ಜುಗಲಬಂದಿ

ಇದೊಂದು ಹೊಸ ಬಗೆಯ ಧಾರಾವಾಹಿ. ಆಗಾಖಾನ್ ಅರಮನೆಯಲ್ಲಿ ಚಿತೆಯಾಗಿ ಹೋದ ಕಸ್ತೂರ್‌ಬಾ, ಗಾಂಧಿ ನೆನಪಿನಲ್ಲಿ ಉಳಿದರು. ಈ ಗದ್ಯಕಥೆ ಭಾವನೆಗಳ ತೀವ್ರತೆಯಲ್ಲಿ ಕವನರೂಪ ತಾಳಿ ಕಂಪು ಬೀರಿದೆ.

ಸಾಂಸಾರಿಕ ಒತ್ತಡದಲ್ಲಿ ರಾಷ್ಟ್ರೀಯ ಚಳವಳಿಯಲ್ಲಿ ಗಾಂಧಿ ಜೊತೆ ಒಂದಾಗಿ ಹೋರಾಡಿದ ಕಸ್ತೂರ್‌ಬಾ ಕಥೆ ಹಲವು ಆಯಾಮಗಳಲ್ಲಿ ಆ ತಾಯಿಯ ಒಳತುಡಿತವನ್ನು ಗಾಂಧಿ ಜೊತೆಗಿನ ಸಂಘರ್ಷವನ್ನು ಸಮರ್ಥವಾಗಿ ಅಭಿವ್ಯಕ್ತಿಸಿದೆ. ಸತ್ಯಘಟನೆಗಳನ್ನು ಎಚ್ಚರದಲ್ಲಿ ಆಧಾರಸಹಿತವಾಗಿ ರಚಿಸಿರುವ ಬರಗೂರು ರಾಮಚಂದ್ರಪ್ಪ ಅವರ ಹೊಸ ಕಥಾ ಶೈಲಿ ಮುಂದಿನ ಕಾದಂಬರಿಕಾರರಿಗೆ ಮಾದರಿಯಾಗಿದೆ.

–ಜಿ. ಕೃಷ್ಣಪ್ಪ ಬೆಂಗಳೂರು

### ನೆನಪಿನ ಭಾವಯಾನ


ನೆನಪಿನ ಭಾವಯಾನದ ಸಹಪಯಣಿಗಳಾಗಿ ನಾನು ಪಡೆದ ಅನುಭೂತಿಯು ಇಲ್ಲಿ ಉಲ್ಲೇಖನೀಯ. ಒಬ್ಬ ರಾಷ್ಟ್ರನಾಯಕನ ಖಾಸಗಿ ಜೀವನವನ್ನು ತಳಕು ಹಾಕಿಕೊಂಡ ಸಾರ್ವಜನಿಕ ಜೀವನದ ಸ್ಮರಣೆಗಳು ಕುತೂಹಲ ಮೂಡಿಸಿವೆ. ಮಗ ಹರಿಲಾಲನ ವಿಷಯದಲ್ಲಿ ಗಾಂಧೀಜಿ ಎಂದೂ ಪಿತನಾಗಲಿಲ್ಲ; ನ್ಯಾಯವಾದಿಯಾಗಿ ಉಳಿದರು. ಆದರೆ ಕಸ್ತೂರ್ ತಮ್ಮ ಜೀವನವಿಡೀ ಮಗನನ್ನು ಮತ್ತು ಗಂಡನನ್ನು ಕ್ಷಮಿಸುತ್ತಲೇ ತಾಯಿಯಾಗಿ ಬೆಳೆದು ನಿಂತ ಪರಿ ಹೃದಯಸ್ಪರ್ಶಿ!

ಸ್ವತಂತ್ರ ವಿಚಾರದ ಗಂಡ ಹೆಂಡಂದಿರ ನಡುವಿನ ವಾದ ವಿವಾದಗಳ ಘರ್ಷಣೆಯು ಬೆಂಕಿಯಾಗದೇ ಜ್ಯೋತಿಯ ಸ್ವರೂಪವನ್ನು ತಳೆದದ್ದು ಅದ್ಭುತ! ಇಡೀ ದೇಶಕ್ಕೆ ಮುತ್ಸದ್ದಿ ರಾಷ್ಟ್ರನಾಯಕನೆಂಬ ಖ್ಯಾತಿ ಪಡೆದ ಒಬ್ಬ ವ್ಯಕ್ತಿಯು ದಾಂಪತ್ಯ ಜೀವನದಲ್ಲಿ ಅಧಿಕಾರಶಾಹಿ ಗಂಡನಾಗಿದ್ದಾಗ ಕಸ್ತೂರ್ ಬಾ ಅವರ ಕೈಯಲ್ಲಿ ಹೂವಾಗಿ ಮುದುಡಿಕೊಳ್ಳಲಿಲ್ಲ; ಫಳಫಳಿಸುವ ವಜ್ರವಾದರು. ಈ ಸಂಸ್ಕಾರದ ಮೇಲೆ ಬೆಳಕು ಚೆಲ್ಲಿದ ಲೇಖಕರನ್ನು ಮತ್ತು ಅವರ ಭಾಷೆ, ಕಲ್ಪನೆ ಮತ್ತು ಕಾವ್ಯ ಕಲೆಗಳಲ್ಲಿ ಅರಳಿದ ಈ ಧಾರಾವಾಹಿಯನ್ನು ನಾನು ಮನಸಾರೆ ಮೆಚ್ಚಿಕೊಂಡಿದ್ದೇನೆ.

–ಮಾಲತಿ ಪಟ್ಟಣಶೆಟ್ಟಿ, ಧಾರವಾಡ

### ಸ್ವಾರಸ್ಯಕರ, ಸಂಗ್ರಹಯೋಗ್ಯ

ಚಾರಿತ್ರಿಕ ಮಹಾಪುರುಷನ ವೈಯುಕ್ತಿಕ ಹಾಗೂ ಸಾಮಾಜಿಕ ಬದುಕಿನ ಕಥನ ಕುತೂಹಲವಾಗಿ, ಸ್ವಾರಸ್ಯಕರವಾಗಿ ಮೂಡಿ ಬಂದಿರುವುದು ಓದುಗರಿಗೆ ಅತ್ಯುಪಯುಕ್ತ ಹಾಗೂ ಸಂಗ್ರಹಯೋಗ್ಯ. ದಾಂಪತ್ಯ ಜೀವನದ ಪಯಣದಲ್ಲಿ ಕಸ್ತೂರ್ ಬಾ ಅವರ ಸ್ತ್ರೀ ಸಂವೇದನೆ ಬಂಡಾಯ




ಧ್ವನಿಯಲ್ಲಿ ಮೂಡಿ ಬರುತ್ತಿದ್ದರೂ ಬಾಂಧವ್ಯಕ್ಕೆ ಅಡ್ಡಿಯಾಗಬಲ್ಲ ಯಾವುದೇ ಅಂಶಗಳಿಲ್ಲ. ಬಾಬಾಸಾಹೇಬರ ಹಾಗೂ ಗಾಂಧೀಜಿ ಅವರ ಮುಖಾಮುಖಿ ಭೇಟಿಯ ಸಂಭಾಷಣೆ ಹಾಗೂ ಕಸ್ತೂರ್ ಬಾರವರಿಗೆ ಅಂಬೇಡ್ಕರ್ ಅವರ ಬಗ್ಗೆ ಇದ್ದ ಅಭಿಮಾನ ಚೆನ್ನಾಗಿ ಮೂಡಿಬಂದಿದೆ.

–ಜಯಮಂಗಲ ಚಂದ್ರಶೇಖರ್, ಮಾಲೂರು

### ಗದ್ಯಪದ್ಯಗಳ ಹೊಸಲೋಕ

ಕಾದಂಬರಿಯುದ್ದಕ್ಕೂ ಗದ್ಯ ಪದ್ಯವನ್ನೊಳಗೊಂಡ ಬರವಣಿಗೆ ಹೊಸ ಲೋಕದ ಅನುಭವ ನೀಡಿತು. ಮೌಲಿಕ ಪ್ರಶ್ನೆಗಳನ್ನು ಎತ್ತುತ್ತಲೇ, ಬಾ–ಬಾಪುವಿನ ರಸವತ್ತಾದ ಬಾಲ್ಯ, ಯೌವನದಲ್ಲಿ ತಣ್ಣಗಿನ ಸಂಘರ್ಷ, ಹೋರಾಟದ ಬದುಕು, ಮೌನಕ್ಕೆ ಮತ್ತು ಏಕಾಂತ, ಏಕಾಕಿತನಕ್ಕೆ ನೀಡಿದ ಹೊಸ ವ್ಯಾಖ್ಯಾನ ಬೆರಗುಗೊಳಿಸಿತು.

ಬಾ ಅವರಲ್ಲಿ ಬಾಪು ಹೋರಾಟದ ಕಿಚ್ಚು ಹತ್ತಿಸಿ ಬಹುತ್ವ ಭಾರತದ ತಾಯಿಯಾಗುವಂತೆ ಮಾಡಿದ್ದು ಅಸಮಾನ್ಯವೇ ಸರಿ. ಅವರಲ್ಲಿ ಎದ್ದು ಕಾಣುವ ತಾಯ್ತನ, ಪತಿ ರಕ್ಷಣೆಯ ಭಾರ, ಅದಕ್ಕಾಗಿ ಅಂಬೇಡ್ಕರರು ಇರುವಲ್ಲಿಗೆ ಹೋಗುವುದು ಮೇಲ್ವರ್ಗದ ಹೆಣ್ಣುಮಗಳೊಬ್ಬಳು ಪರಿವರ್ತನೆಗೊಂಡ ಮನಸ್ಥಿತಿಯ ಸಂಕೇತ. ಹಂತ ಹಂತವಾಗಿ ಬಾ, ಪರಿವರ್ತನೆ ಆಗುವುದರಲ್ಲಿಯೇ ವಿಶೇಷ ಇದೆ. ಈ ಮೂವರು ಅಸಹಾಯಕರ, ದಮನಿತರ, ಕರುಳರಳಿಸಿ ಕಣ್ಣಾಗಿ ಮಿಡಿದದ್ದು ರೋಮಾಂಚನ. ಇವರ ಬದುಕೇ ಮಹಾಕಾವ್ಯ, ಸಂಕಲನಗೊಂಡ ಸಂಕಥನ. ಕೊನೆಗೆ ಗಾಂಧಿಯನ್ನು ಒಂಟಿ ಮಾಡಿ ಬಾ, ಹೋದದ್ದು ಕಂಬನಿ ತರಿಸಿತು.

–ಸತ್ಯಾನಂದ ಪಾತ್ರೋಟ

### ನವಿರಾದ ಚಿತ್ರಣ

ಈಗಿನ ಯುವ ಪೀಳಿಗೆಗೆ ದಂಪತಿಗಳ ಅನ್ಯೋನ್ಯತೆ ಎಂದರೆ ಏನು ಎಂಬುದನ್ನು ಕಾದಂಬರಿ ಬಹಳ ಸೊಗಸಾಗಿ ಚಿತ್ರಿಸಿದೆ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಬಾಪು ಪಟ್ಟ ಕಷ್ಟ, ಹಿಂದೂ ಏಕತೆಗೆ ತಮ್ಮ ಜೀವನವನ್ನು ಒತ್ತೆಯಿಟ್ಟು ಹೋರಾಡಿದ ಪರಿ ಮನಮುಟ್ಟುವಂತೆ ಚಿತ್ರಿತವಾಗಿದೆ.

–ಶಿವಪ್ಪ ಹಾದಿಮನಿ

### ಅಸಾಮಾನ್ಯ ವ್ಯಕ್ತಿತ್ವದ ದುರಂತ ನಾಯಕಿ

ಬಾ ನಿರಕ್ಷರಕುಕ್ಷಿಯಾಗಿದ್ದರೂ ತಮ್ಮದೇ ಆದ ಸ್ವತಂತ್ರ ಚಿಂತನೆ ಹೊಂದಿದ್ದುದು, ಗಾಂಧೀಜಿಯವರ ಆಂದೋಲನದ ಚಳವಳಿಗಳಿಗೆ ಸ್ಪಂದಿಸುತ್ತಾ ತಾವೂ ಸಮಭಾಗಿಯಾಗುತ್ತಿದ್ದುದು ಮೆಚ್ಚತಕ್ಕ ಅಂಶ. ಮಹಾನಾಯಕರಾಗಿದ್ದ ಗಾಂಧೀಜಿ ಹಾಗೂ ಅಂಬೇಡ್ಕರ್ ಅವರ ವಿಚಾರಧಾರೆಗಳು ಭಿನ್ನವಾಗಿದ್ದರೂ ಅಂತಿಮವಾಗಿ ಸಹಮತದಲ್ಲಿ ಒಪ್ಪಿಗೆಯಾಗಿದ್ದು ಗಮನಾರ್ಹ. ಕಸ್ತೂರ್ ಬಾ ಅವರ ದುರಂತ ಅಂತ್ಯ ಮನಮಿಡಿಯಿತು.

–ಪೂರ್ಣಿಮಾ ಮೂರ್ತಿ, ಬೆಂಗಳೂರು

### 'ಇನಿಯನ ಆಗಮನ'ದಂಥ ಕಾತರ

ಕಸ್ತೂರ್ ಕಥನದ ಸಂಚಿಕೆಗಳ ನಿರೀಕ್ಷೆಯಂತೂ, ತನ್ನ ಇನಿಯನ ಆಗಮನಕ್ಕೆ ಕಾದು ಕಾತರಿಸುವ ಅಭಿಸಾರಿಕೆಯ ಸ್ಥಿತಿ ನನ್ನದಾಗಿತ್ತು. ಕಾದಂಬರಿಕಾರರ ಸ್ತ್ರೀಸಂವೇದನಾಶೀಲ ಮನೋಭೂಮಿಕೆಯಲ್ಲಿ ಪಲ್ಲವಿಸಿದ ಪಾತ್ರಗಳು ಮಾನವತೆಯ ಜೀವನ ಸಂಪ್ರೀತಿಯ ಜೀವಗೋಳ ಪಡೆದಿವೆ.

ಈ ಕಾದಂಬರಿಯಿಂದ ಎರಡು ಸಂಗತಿಗಳಿಗೆ ನನ್ನ ತಿಳುವಳಿಕೆಯ ಕ್ಷಿತಿಜ ವಿಸ್ತರಣೆಗೊಂಡಿದೆ. ಒಂದು, ಗಾಂಧಿ ಜತನದ ಸಂಘರ್ಷ–ಅನುಬಂಧ–ಅನುಸಂಧಾನದ ಮಾದರಿ ದಾಂಪತ್ಯ ಮತ್ತು ಸಾರ್ವತ್ರಿಕ ಬದುಕಿನಾದ್ಯಂತ ಬಾಪೂಜಿಗೆ ಹೆಗಲೆಣೆಯಾಗಿ ದುಡಿದು ಮಡಿದ ಕಸ್ತೂರ್ ಬಾ ಅವರ ಅನುರೂಪ ವ್ಯಕ್ತಿತ್ವ. ಎರಡನೆಯದು, ಅಂಬೇಡ್ಕರ್ ಭೇಟಿಯ ನಂತರದಲ್ಲಿ ಬದಲಾದ ಗಾಂಧಿಯ ತಾತ್ವಿಕ ಚಿಂತನೆ ಮಿಗಿಲಾಗಿ ಅಸ್ಪೃಶ್ಯತೆ ಆಚರಣೆ ಸಂಬಂಧದ ಪ್ರತಿರೋಧಕ ಗುಣ.

–ಡಾ. ಓ. ನಾಗರಾಜು, ಕೊರಟಗೆರೆ

### ಹೃದಯಸ್ಪರ್ಶಿ ಕಥನ

ಗಾಂಧಿ– ಕಸ್ತೂರ್ ಕಥನ ಹೃದಯಸ್ಪರ್ಶಿ.

–ಡಾ. ಲಕ್ಷ್ಮೀನಾರಾಯಾಣ, ಬೆಂಗಳೂರು; ವಿದ್ಯಾ ಶಿರಹಟ್ಟಿ, ಧಾರವಾಡ; ಎ. ಶಿವಕುಮಾರ್, ಮೈಸೂರು; ಮಂಜುಳ ಗೋನಾಳ, ಹಂಪಿ, ಡಾ. ಪುಷ್ಪಭಾರತಿ ಆರ್.ಎ. ಚಿಕ್ಕಮಗಳೂರು; ವಿ.ಎಸ್. ಮಾನಸ ಶಿವರಾಮಕೃಷ್ಣ, ಶಿವಕುಮಾರ್ ಎಸ್., ಊರುಕೆರೆ, ತುಮಕೂರು